# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ. 2203 ದಿನಾಂಕ : ~~02.12.2019~~ 17.11.19.

## ಸಭಾ ನಡಾವಳಿ

**ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ : 13.11.2019 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯನ್ನು ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.**

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀಯುತ ಚಿಕ್ಕಸಿದ್ದೇಗೌಡರು ರವರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ, ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಉಮೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು.
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ.
7. ಶ್ರೀ ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
8. ಶ್ರೀ. ಸೋಮಶೇಖರ್, ಕಿರಿಯ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ.
9. ಶ್ರೀ ಶಿವಪ್ರಸಾದ್, ಕಿರಿಯ ಇಂಜಿನಿಯರ್(ವಿ), ರೂಪನಗರ ಶಾಖೆ
10. ಶ್ರೀ ಪುಟ್ಟರಾಜ, ಸಹಾಯಕ ಲೆಕ್ಕಾಧಿಕಾರಿ, ಹೂಟಗಳ್ಳಿ ಉಪವಿಭಾಗ

**ಸಭೆಗೆ ಹಾಜರಿದ್ದ ಜನರು :**

1. ಶ್ರೀ ಪದ್ಮೇಗೌಡ, ಎನ್.ಜೆ. ಆಸ್ಪತ್ರೆ, ಇಲವಾಲ, ಮೈಸೂರು.
2. ಶ್ರೀ ವೈಕುಂಠಪ್ಪ, ಎಂ.ಆರ್.ಆರ್. ಲೇಔಟ್, ಮೈಸೂರು
3. ಪಂಚಾಚಾರ್ಯ ಬಡಾವಣೆ ನಿವಾಸಿಗಳು, ಮೈಸೂರು
4. ಪಂಚಮುಖಿ ಬಡಾವಣೆ ನಿವಾಸಿಗಳು, ವಿಜಯನಗರ 4ನೇ ಹಂತ, ಮೈಸೂರು.
5. ಜವರೇಗೌಡ ಮತ್ತು ಪ್ರಕಾಶ ಲೇಔಟ್, ಮೈಸೂರು.
6. ಶ್ರೀ ಶಿವಮೂರ್ತಿ, ಬೆಳವಾಡಿ, ಮೈಸೂರು.

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳನ್ನು ಹಾಗೂ ಜನರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

...2...

Scanned by CamScanner

ದಿನಾಂಕ : 14.08.2019 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು : 2

ದಿನಾಂಕ : 13.11.2019 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 6

**ದಿನಾಂಕ : 14.08.2019 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.**

| ಕ್ರ.ಸಂ. | **ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ** | **ವಿಷಯ** | **ತೆಗೆದುಕೊಂಡ ಕ್ರಮ** |
|---|---|---|---|
| 1. | **ಶ್ರೀಮತಿ ಸುಧಾ** | ▪ ಇವರು ತಮ್ಮ ಮನೆಯ ಮುಂಭಾಗದಲ್ಲಿ ವಿದ್ಯುತ್ ಕಂಬವು ಶಿಥಿಲಗೊಂಡಿದ್ದು, ಇದನ್ನು ಬದಲಾಯಿಸಿ ಕೊಡಲು ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ, ಸೂಕ್ತ ಕ್ರಮ ಕೈಗೊಂಡಿರುತ್ತಾರೆ. |
| 2. | **ಶ್ರೀ ಕೃಷ್ಣ** | ▪ ಇವರು ಕೈಮಗ್ಗ ಕಾರ್ಖಾನೆ ನಡೆಸುತ್ತಿದ್ದು, ಸದರಿ ಕಾರ್ಖಾನೆಯ ಸ್ಥಾವರ ಸಂಖ್ಯೆ RYP42 ರ ವಿದ್ಯುತ್ ಬಿಲ್ಲಿನ ಮೊತ್ತವು ಹೆಚ್ಚಾಗಿ ಬರುತ್ತಿರುತ್ತದೆ. ಈ ವಿದ್ಯುತ್ ಬಿಲ್ಲಿನಲ್ಲಿ ಸರ್ಕಾರದಿಂದ ವಿನಾಯಿತಿ ನೀಡಬೇಕಾಗಿ ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಹಕರಿಗೆ, ತಮ್ಮ ಬಳಿ ಸಂಬಂಧಪಟ್ಟ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರಗಳನ್ನು ನೀಡಲು ಸೂಚಿಸಿರುತ್ತಾರೆ. ಆದರೆ ಗ್ರಾಹಕರು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. |



Scanned by CamScanner

ನಂತರ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ದಿನಾಂಕ : 13.11.2019 ರ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಜನರು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿ, ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | **ಶ್ರೀ ಪದ್ಮೇಗೌಡ, ಎನ್.ಹೆ.ಆಸ್ಪತ್ರೆ, ಇಲವಾಲ ಮೈಸೂರು** | ▪ ಇವರು ತಮ್ಮ ಸ್ಥಾವರದ ಮುಂದಿರುವ ಕಂಬವನ್ನು ಸ್ಥಳಾಂತರಿಸಲು ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು. ಇದಕ್ಕೆ ಶಾಖಾಧಿಕಾರಿಯವರು ಉತ್ತರಿಸಿ, ಈಗಾಗಲೇ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿರುವುದೆಂದು ತಿಳಿಸಿರುತ್ತಾರೆ. |
| 2. | **ಶ್ರೀ ವೈಕುಂಠಪ್ಪ, ಎಂ.ಆರ್.ಆರ್ ಲೇಔಟ್ ನಿವಾಸಿಗಳು, ಮೈಸೂರು** | ▪ ಈ ಬಡಾವಣೆಯ ನಿವಾಸಿಗಳು ತಮ್ಮ ಬಡಾವಣೆಯಲ್ಲಿ ಯು.ಜಿ. ಕೇಬಲ್ ಮುಖಾಂತರ ವಿದ್ಯುದೀಕರಣಗೊಂಡಿದ್ದು, ಯು.ಜಿ.ಕೇಬಲ್ ಇರುವುದರಿಂದ ಮಾರ್ಗಗಳ ತೊಂದರೆ(Line Trable) ಯದಾಗ ನಿರ್ವಹಣೆ ಕಾರ್ಯವು ವಿಳಾಂಬವಾಗುತ್ತಿರುತ್ತದೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಕೆ.ಇ.ಆರ್.ಸಿ ನಿಯಮಾನುಸಾರ ಶೇ.25% ಮನೆ ನಿರ್ಮಾಣವಾಗದ ಕಾರಣ ಬಡಾವಣೆಯವರೇ ನಿರ್ವಹಣೆ ಮಾಡಬೇಕಾಗಿರುತ್ತದೆ. ಸದರಿ ಬಡಾವಣೆಯ ಮಾಲೀಕರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. |
| 3 | **ಪಂಚಾಚಾರ್ಯ ಲೇಔಟ್ ನಿವಾಸಿಗಳು, ಮೈಸೂರು** | ▪ ಈ ಬಡಾವಣೆಯು ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಸದರಿ ಶಾಖೆಯು ಬಡಾವಣೆಯಿಂದ ದೂರ ಇರುವುದರಿಂದ ಗ್ರಾಹಕರಿಗೆ ಅನುಕೂಲವಾಗುವಂತೆ ಹೂಟಗಳ್ಳಿ | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಈಗಾಗಲೇ ಹೂಟಗಳ್ಳಿ ಉಪವಿಭಾಗದ ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, |

Scanned by CamScanner

| | | | |
|---|---|---|---|
| | | ಶಾಖಾ ವ್ಯಾಪ್ತಿಗೆ ಸೇರಿಸಬೇಕಾಗಿ ಕೋರಿರುತ್ತಾರೆ. | ಗ್ರಾಹಕರಿಗೆ ಅನುಕೂಲವಾಗುವಂತೆ **24 X 7 ಸೇವಾ ಕೇಂದ್ರವನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು.** |
| 4 | **ಪಂಚಾಮುಖಿ ಲೇಔಟ್ ನಿವಾಸಿಗಳು, ಮೈಸೂರು.** | ▪ ಈ ಬಡಾವಣೆಯು ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಸದರಿ ಶಾಖೆಯು ಬಡಾವಣೆಯಿಂದ ದೂರ ಇರುವುದರಿಂದ ಗ್ರಾಹಕರಿಗೆ ಅನುಕೂಲವಾಗುವಂತೆ ಹೂಟಗಳ್ಳಿ ಶಾಖಾ ವ್ಯಾಪ್ತಿಗೆ ಸೇರಿಸಬೇಕಾಗಿ ಕೋರಿರುತ್ತಾರೆ. | |
| 5 | **ಜವರೇಗೌಡ ಹಾಗೂ ಪ್ರಕಾಶ ಲೇಔಟ್, # 370/2, ಎಸ್.ಬಿ.ಇ.ಐ ಶಾಲೆಯ ಹತ್ತಿರ, ಬೆಳವಾಡಿ, ಮೈಸೂರು** | ▪ ಈ ಬಡಾವಣೆಯು ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಸದರಿ ಶಾಖೆಯು ಬಡಾವಣೆಯಿಂದ ದೂರ ಇರುವುದರಿಂದ ಗ್ರಾಹಕರಿಗೆ ಅನುಕೂಲವಾಗುವಂತೆ ಹೂಟಗಳ್ಳಿ ಶಾಖಾ ವ್ಯಾಪ್ತಿಗೆ ಸೇರಿಸಬೇಕಾಗಿ ಕೋರಿರುತ್ತಾರೆ.<br>▪ ಮನೆ ನಂ. 007, ಜಯಮ್ಮ ನಿಲಯ ಇವರ ಮನೆಯ ಮುಂಭಾಗವಿರುವ ಪರಿವರ್ತಕವನ್ನು ಸ್ಥಳಾಂತರಿಸಬೇಕಾಗಿ ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, **ಈಗಾಗಲೇ** ಹೂಟಗಳ್ಳಿ ಉಪವಿಭಾಗದ ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಗ್ರಾಹಕರಿಗೆ ಅನುಕೂಲವಾಗುವಂತೆ **24 X 7 ಸೇವಾ ಕೇಂದ್ರವನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು**<br>▪ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ, ಅಂದಾಜು ಪಟ್ಟಿ ತಯಾರಿಸಿ, ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. |
| 6 | **ಶ್ರೀ ಶಿವಮೂರ್ತಿ ಬೆಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಇಲವಾಲ ಹೋಬಳಿ, ಮೈಸೂರು** | ▪ ಇಲವಾಲ ಶಾಖೆಯನ್ನು ಮರು ನಾಮಕರಣಗೊಳಿಸಿ ಬೆಳವಾಡಿ ಶಾಖೆ ಎಂದು ಮಾಡಬೇಕಾಗಿ ಬೆಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಈ ವಿಷಯದ ಬಗ್ಗೆ ಮೇಲಾಧಿಕಾರಿಯವರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರಿಸಿದರು. |

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ, ಜನರಿಗೆ ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆದ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಜನರಿಗೂ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

Scanned by CamScanner

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ

Scanned by CamScanner